# ನನ್ನ ಪಾಲಿನ ಅತ್ಯುತ್ತಮ ಶಿಕ್ಷಕ ಸಮಯ

'ತಂದೆ-ತಾಯಿಯೇ ಮೊದಲ ಗುರು' ಎನ್ನುವ ಮಾತು ನನಗೆ ಹೆಚ್ಚು ಅನ್ವಯವಾಗುತ್ತದೆ. ನಮ್ಮ ಶಿಕ್ಷಣ ಪದ್ಧತಿ ಹೇಗಿದೆ ಎಂದರೆ, ಆರಂಭದಲ್ಲಿ ಸಾಧಿತ ಸಂಗತಿಯನ್ನೇ ಹೇಳಿಕೊಡುತ್ತಾರೆ. ಪೂರ್ವದ ಸಂಶೋಧನೆ, ವಿಜ್ಞಾನ, ತಂತ್ರಜ್ಞಾನ ಎಲ್ಲದೂ ಇತಿಹಾಸ. ಆದರೆ ಎಲ್ಲ ಕಾಲದಲ್ಲೂ ಹೊಸತಿಗೆ ಅವಕಾಶ ಇರುತ್ತದೆ. ಹೊಸ ಆವಿಷ್ಕಾರ, ಸಂಶೋಧನೆ ಹೇಗೆ ಮಾಡಬೇಕು ಎನ್ನುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಹಳೆಯ ಮತ್ತು ಹೊಸತಿನ ನಡುವಿನ ಸಂದರ್ಭವನ್ನು ಸೂಕ್ಷ್ಮವಾಗಿ ಗ್ರಹಿಸಬೇಕು. ಅಂತಹ ಅರಿವನ್ನು ನಮ್ಮ ಪೋಷಕರಿಂದ ಕಲಿತಿದ್ದೇನೆ.

ಓದಿನ ನಂತರ ನಟನೆ ಬಗ್ಗೆ ಆಸಕ್ತಿ ಹುಟ್ಟಿದ ಮೇಲೆ, ಆಡಿಷನ್ ಕೊಡುತ್ತೇನೆ ಎಂದು ಮನೆಯಲ್ಲಿ ಹೇಳಿದೆ. ಆಗ ನನ್ನ ತಂದೆ 'ನನಗಂತೂ ಈ ಕ್ಷೇತ್ರದ ಬಗ್ಗೆ ಗೊತ್ತಿಲ್ಲ. ನಿನಗೂ ಹೇಗೆ ಸಿದ್ಧತೆ ಮಾಡಿಕೊಳ್ಳಬೇಕು, ಏನು ಮಾಡಬೇಕು ಎನ್ನುವುದು ಗೊತ್ತಿಲ್ಲ. ಮೊದಲು ಅದಕ್ಕೆ ತಯಾರಿ ಮಾಡಿಕೊ. ಅವಕಾಶ ಒಮ್ಮೆ ಸಿಗುತ್ತದೆ. ಅದಕ್ಕೆ ನೀನು ಸಿದ್ಧತೆ ಮಾಡಿಕೊಂಡಿರಬೇಕು. ಅವಕಾಶ ಸಿಗುವುದು ಎರಡನೇ ಆಯ್ಕೆ ಆಗಬೇಕು. ಅದಕ್ಕೆ ಬೇಕಾಗುವ ಕೌಶಲ ಕಲಿಯುವುದು ಮೊದಲ ಆಯ್ಕೆ. ಒಂದು ಅವಕಾಶ ಸಿಕ್ಕಾಗ ಸರಿಯಾಗಿ ಅದನ್ನು ಬಳಸಿಕೊಳ್ಳಲಿಲ್ಲ ಎಂದರೆ, ಜೀವನದಲ್ಲಿ ಮೊದಲ ಅವಕಾಶ ಕೊಟ್ಟವನು ಮತ್ತೆ ಯಾವತ್ತೂ ನಿನ್ನನ್ನು ಕರೆಯುವುದಿಲ್ಲ. ಅಂತಹ ದುರಂತವನ್ನು ಎದುರಿಸಬಾರದು ಎನ್ನುವುದಾದರೆ ಮೊದಲು ಕಲಿ' ಎಂದರು. ಅವರ ಆ ಮಾತು ಇಂದಿಗೂ ನನ್ನನ್ನು ಎಚ್ಚರಿಸುತ್ತಿರುತ್ತದೆ.

ಅನೇಕರು ನನ್ನ ನಟನೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾರೆ. ಆದರೆ ನನ್ನ ತಾಯಿ ನಾನು ಏನು ಕೆಟ್ಟದಾಗಿ ಮಾಡಿದೆ ಎನ್ನುವುದನ್ನು ಹೇಳಲು ಫೋನ್ ಮಾಡುತ್ತಾರೆ. ಅಮ್ಮ ನನ್ನ ಅಭಿನಯದಲ್ಲಿನ ದೋಷಗಳನ್ನು ಹುಡುಕುತ್ತಾರೆ. ತುಂಬ ಚಿಕ್ಕ ಮತ್ತು ಸೂಕ್ಷ್ಮ ಸಂಗತಿಗಳನ್ನು ಗುರುತಿಸಿ ತಿದ್ದುತ್ತಾರೆ. ಅವರು ಅತ್ಯುತ್ತಮ ವಿಮರ್ಶಕಿ, ಯಾವುದನ್ನೂ ಮುಚ್ಚಿಡದೆ ನೇರವಾಗಿ ಮತ್ತು ನನಗೆ ಸಹಕಾರಿ ಆಗುವಂತೆ ತಿಳಿಸುತ್ತಾರೆ. ನಾನು ಸರಿ ಮಾಡಬೇಕು ಎನ್ನುವುದು ಅವರ ದೃಷ್ಟಿ. ಅವರೇ ನನ್ನನ್ನು ತಿದ್ದಿ ತೀಡುವ ಗುರು.

ನನ್ನ ಗುರುಗಳಿಂದ ಏನಾದರೂ ಕಲಿತಿದ್ದೇನೆ ಅಂದರೆ ಅದು 'ಶಿಸ್ತು'. ನಮ್ಮ ಜೀವನದ ಪ್ರತಿಯೊಂದರಲ್ಲಿಯೂ ಶಿಸ್ತು, ಸಮಯ ಪರಿಪಾಲನೆಯನ್ನು ಪಾಲಿಸಬೇಕು ಎಂಬುದನ್ನು ಕಲಿಸಿದ್ದೂ ಗುರುಗಳೇ.

ನಮ್ಮ ಜೀವನದಲ್ಲಿ ಎದುರಾಗುವ ಪ್ರತಿಯೊಬ್ಬ ವ್ಯಕ್ತಿಯೂ ಗುರುವಿನ ರೂಪದಲ್ಲಿಯೇ ಇರುತ್ತಾನೆ. ವ್ಯಕ್ತಿಗಳು ನಿರ್ದಿಷ್ಟವಾಗಿ ನಮಗೆ ಏನು ಕಲಿಸುತ್ತಾರೆ ಎನ್ನುವುದನ್ನು ಅರಿಯಬೇಕು. ಸರಳವಾಗಿ ಹೇಳಬೇಕೆಂದರೆ, ನಾನು ನಟನೆ ಆರಂಭಿಸಿದಾಗ ಪುರಸ್ಕಾರ ಮನ್ನಣೆ ಸಿಗುತ್ತಿರಲಿಲ್ಲ. ಆವತ್ತು ಪ್ರಶಸ್ತಿಗಳು ಸಿಕ್ಕಿದ್ದರೆ, ವೇದಿಕೆಯನ್ನು ಉದ್ದೇಶಿಸಿ ಹೇಗೆ ಮಾತನಾಡಬೇಕು ಎನ್ನುವುದು ಗೊತ್ತಾಗುತ್ತಿರಲಿಲ್ಲ. ಸ್ವಲ್ಪ ಕಷ್ಟಪಟ್ಟು ಅಂತಹ ಅವಾರ್ಡ್ ತೆಗೆದುಕೊಂಡಿದ್ದರಿಂದ ಅದರ ಬಗ್ಗೆ ಮಾತನಾಡುವ ಶಕ್ತಿ ಬೆಳೆದಿದೆ. ನನ್ನ ಪಾಲಿಗೆ ಅತ್ಯುತ್ತಮ ಗುರುವೆಂದರೆ, ಸಮಯ.

ಜೀವನದಲ್ಲಿ ಗುರು ತುಂಬಾ ಮುಖ್ಯ. ಒಂದು ಮಗು ತನ್ನ ಪೋಷಕರನ್ನು ಬಿಟ್ಟು ಹೆಚ್ಚಿನ ಸಮಯ ಕಳೆಯುವುದು ಗುರುವಿನ ಬಳಿಯೇ. ನಮ್ಮ ಗುರಿಯ ಮಾರ್ಗದರ್ಶಿ ಗುರು. ನಾವು ಹತ್ತು ವರ್ಷ ಪ್ರಯಾಣಿಸಬೇಕಾದ ಹಾದಿಯನ್ನು ಗುರು ಎರಡು ವರ್ಷಕ್ಕೆ ಪೂರೈಸುವಂತೆ ಮಾಡುತ್ತಾರೆ. ಉಳಿದ ಎಂಟು ವರ್ಷ ಕಲಿತದ್ದನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ಅವಕಾಶ ಇರುತ್ತದೆ. ಗುರು ಇಲ್ಲದೆ ಇದ್ದರೆ ಆ ಹತ್ತು ವರ್ಷ ಸಮಯ ತೆಗೆದುಕೊಂಡೂ ಸರಿಯಾಗಿ ಕಲಿಯುತ್ತಿದ್ದೇವೋ ಇಲ್ಲವೋ ಗೊತ್ತಿಲ್ಲ. ನಮಗೆ ಸರಿಯಾದ ಮಾರ್ಗವನ್ನು ತೋರಿಸುವುದೇ ಗುರು.



**ಕಿರಣ್ ರಾಜ್**
ನಟ

**ನಿರೂಪಣೆ:**
**ರಾಘವೇಂದ್ರ ಕೆ.**

**ಮರೆಯಲಾರದ ಗುರುಗಳ ಮಾತು:** ಶಾಲಾ ಪಠ್ಯ ಮಾತ್ರವಲ್ಲದೆ ಜೀವನ ಪಾಠವನ್ನೂ ಹೇಳಿಕೊಟ್ಟ ಗುರುಗಳು ಎಂದಿಗೂ ಮನದಲ್ಲಿ ನಿಲ್ಲುವರು. ಜೀವನದಲ್ಲಿ ಗೊಂದಲ ಎದುರಾದಾಗ, ಧೈರ್ಯ ಕಳೆದುಕೊಂಡಾಗ ಅವರ ಮಾತುಗಳು ದೀವಿಗೆಯಾಗಿಯೂ ದಾರಿ ತೋರಬಲ್ಲವು. ನಿಮ್ಮ ಜೀವನದಲ್ಲಿ ನಿಮ್ಮ ಮೇಲೆ ಪ್ರಭಾವ ಬೀರಿದ ಶಿಕ್ಷಕರು ಯಾರು? ಎಂದಿಗೂ ಮನದಲ್ಲಿ ಅಚ್ಚಳಿಯದೆ ಉಳಿದ ಅವರ ಮುತ್ತಿನಂಥ ಮಾತು ಯಾವುದು? 'ಸುಧಾ'ದೊಂದಿಗೆ ನಿಮ್ಮ ಅನುಭವವನ್ನು ಹಂಚಿಕೊಳ್ಳಬಹುದು. 150 ಪದಮಿತಿಯಲ್ಲಿ, ನುಡಿ ಅಥವಾ ಯುನಿಕೋಡ್‌ನಲ್ಲಿ ನಿಮ್ಮ ಬರಹವಿರಲಿ. ಕೊನೆಯ ದಿನಾಂಕ; ಅಕ್ಟೋಬರ್ 02. ಇಮೇಲ್– editorsu@sudha.co.in